# <u>ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ</u>

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)**

**ಮೊಬೈಲ್ ಸಂಖ್ಯೆ: 9449597428**
**ಇಮೇಲ್: seraichur@gmail.com**
**ಲಗತ್ತುಗಳು:**

**ಅಧೀಕ್ಷಕ ಅಭಿಯಂತರರು**
**ಕಾರ್ಯ ಮತ್ತು ಪಾಲನೆ ವೃತ್ತ ಜೆಸ್ಕಾಂ**
**ರಾಯಚೂರು ರವರ ಕಚೇರಿ**

---

**ಪ.ಸಂ:ಅಅ/ಕಾ.ನಿ.ಅ/ಸ.ಕಾ.ನಿ/ಕಾ&ಪಾ/ವೃತ್ತ/ಜೆಸ್ಕಾಂ/ರಾಯಚೂರು/20-21/ 2812-21** **ದಿನಾಂಕ: 28.10.2021**

## <u>ರಾಯಚೂರು ವೃತ್ತ ವ್ಯಾಪ್ತಿಯ ಹೆಚ್.ಟಿ.ಗ್ರಾಹಕರೊಂದಿಗೆ ಜರುಗಿದ ಸಂವಾದ ಸಭೆಯ ನಡಾವಳಿಗಳು</u>

| | | |
|---|---|---|
| **<u>ಅಧ್ಯಕ್ಷರು</u>** | : | **ಶ್ರೀ ಚಂದ್ರಶೇಖರ್ ದೇಸಾಯಿ<br>ಅಧೀಕ್ಷಕ ಅಭಿಯಂತರರು (ವಿ), ಪ್ರಭಾರಿ<br>ಕಾರ್ಯ ಮತ್ತು ಪಾಲನಾ ವೃತ್ತ, ಜೆಸ್ಕಾಂ, ರಾಯಚೂರು.** |
| **ದಿನಾಂಕ** | : | **25.10.21 / 11:00 AM** |
| **ಸ್ಥಳ** | : | **ಕ.ವಿ.ಪ್ರ.ನಿ.ನಿ, ನೌಕರರ ಪತ್ತಿನ ಸಹಕಾರ ಸಂಘ, ರಾಯಚೂರು.** |

**<u>ಸಭೆಯಲ್ಲಿ ಉಪಸ್ಥಿತರಿದ್ದವರು:</u>**

1. ಶ್ರೀ ರಿಯಾಜ್ ಅಹಮದ್, ಕಾರ್ಯನಿರ್ವಾಹಕ ಅಭಿಯಂತರರು, TL & SS ವಿಭಾಗ, ಕವಿಪ್ರನಿನಿ, ಲಿಂಗಸೂಗೂರು.
2. ಶ್ರೀ ರಾಜೇಶ್ ವರ್ಮಾ, ಕಾರ್ಯನಿರ್ವಾಹಕ ಅಭಿಯಂತರರು, ಕಾ ಮತ್ತು ಪಾ ವಿಭಾಗ, ಜೆಸ್ಕಾಂ, ಸಿಂಧನೂರು.
3. ಶ್ರೀ ಮಹೇಶ್ ಕುಮಾರ್, ಕಾರ್ಯನಿರ್ವಾಹಕ ಅಭಿಯಂತರರು, ಕಾ ಮತ್ತು ಪಾ ನಗರ ವಿಭಾಗ, ಜೆಸ್ಕಾಂ, ರಾಯಚೂರು.
4. ಶ್ರೀ ರಾಘವೇಂದ್ರ, ಕಾರ್ಯನಿರ್ವಾಹಕ ಅಭಿಯಂತರರು (ಪ್ರ), 220 ಕೆವಿ ಸ್ವೀಕೃತ ಕೇಂದ್ರ, ಕವಿಪ್ರನಿನಿ, ರಾಯಚೂರು.
5. ಶ್ರೀ ರಾಜೇಶ್ ಕುಮಾರ್, ಕಾ.ನಿ. ಅಭಿಯಂತರರು (ಕಚೇರಿ) ಪ್ರಭಾರಿ, ವೃತ್ತ ಕಚೇರಿ, ಜೆಸ್ಕಾಂ, ರಾಯಚೂರು.
6. ಶ್ರೀ ಎನ್. ಗಣೇಶ್, ಲೆಕ್ಕ ನಿಯಂತ್ರಣಾಧಿಕಾರಿಗಳು (ಪ್ರಭಾರಿ), ಕಾ ಮತ್ತು ಪಾ ವೃತ್ತ, ಜೆಸ್ಕಾಂ, ರಾಯಚೂರು.
7. ಶ್ರೀಮತಿ ಶಿವರಂಜನಿ, ಲೆಕ್ಕಾಧಿಕಾರಿಗಳು (ಪ್ರಭಾರಿ), ಕಾ ಮತ್ತು ಪಾ ನಗರ ವಿಭಾಗ, ಜೆಸ್ಕಾಂ, ರಾಯಚೂರು.
8. ಶ್ರೀ ಬಿ.ಆರ್.ಚಿರಂಜೀವಿ, ಸ.ಕಾ.ನಿ ಅಭಿಯಂತರರು, ಕಾ ಮತ್ತು ಪಾ ನಗರ ಉಪವಿಭಾಗ-1, ಜೆಸ್ಕಾಂ ರಾಯಚೂರು.
9. ಶ್ರೀ ಹುಲುಗಪ್ಪ, ಸ.ಕಾ.ನಿ ಅಭಿಯಂತರರು, ಕಾ ಮತ್ತು ಪಾ ನಗರ ಉಪವಿಭಾಗ-2, ಜೆಸ್ಕಾಂ ರಾಯಚೂರು.
10. ಶ್ರೀ ಬನ್ನೆಪ್ಪ ಕರಿಬಂಟನಾಳ, ಸ.ಕಾ.ನಿ ಅಭಿಯಂತರರು, ಕಾ ಮತ್ತು ಪಾ ಉಪವಿಭಾಗ, ಜೆಸ್ಕಾಂ ಸಿರಿವಾರ.
11. ಶ್ರೀ ಪಂಪನಗೌಡ, ಸ.ಕಾ.ನಿ ಅಭಿಯಂತರರು, ಕಾ ಮತ್ತು ಪಾ ಉಪವಿಭಾಗ, ಜೆಸ್ಕಾಂ, ಮಾನ್ವಿ.
12. ಶ್ರೀ ಹನುಮೇಶ್ ನಾಯಕ್, ಸ.ಕಾ.ನಿ ಅಭಿಯಂತರರು, ಕಾ ಮತ್ತು ಪಾ ಉಪವಿಭಾಗ (ಗ್ರಾ), ಜೆಸ್ಕಾಂ, ರಾಯಚೂರು.
13. ಶ್ರೀ ಕಳಕಪ್ಪ, ಸ.ಕಾ.ನಿ ಅಭಿಯಂತರರು, ಕಾ ಮತ್ತು ಪಾ ಉಪವಿಭಾಗ, ಜೆಸ್ಕಾಂ, ದೇವದುರ್ಗ.
14. ಶ್ರೀ ವಿದ್ಯಾಸಾಗರ ವಿ.ಎಸ್, ಸ.ಕಾ.ನಿ ಅಭಿಯಂತರರು, ಹೆಚ್.ಟಿ ಉಪವಿಭಾಗ, ಜೆಸ್ಕಾಂ, ರಾಯಚೂರು.

~ ~ ~ ~ ~ ~ ~

ಮೊದಲಿಗೆ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗ್ರಾಹಕರಿಗೂ ಮತ್ತು ಎಲ್ಲಾ ಅಧಿಕಾರಿ ರವರಿಗೆ ಸ್ವಾಗತಿಸಿ, ಗ್ರಾಹಕರೊಂದಿಗೆ ಸಂವಾದ ಪ್ರಾರಂಭಿಸಲಾಯಿತು. ಈ ಸಭೆಯಲ್ಲಿ ಒಟ್ಟು 14 ಅರ್ಜಿಗಳನ್ನು ಗ್ರಾಹಕರಿಂದ ಸ್ವೀಕರಿಸಲಾಯಿತು ಮತ್ತು ಅವುಗಳಲ್ಲಿ ಕೆಲವಕ್ಕೆ ಸಭೆಯಲ್ಲಿಯೇ ಕ್ರಮ ತೆಗೆದುಕೊಳ್ಳಲಾಯಿತು ಮತ್ತು ಇನ್ನು ಕೆಲವಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಸಂಬಂಧಪಟ್ಟ ಅಧಿಕಾರಿವರಿಗೆ ಸೂಚಿಸಲಾಯಿತು. ಸಭೆಯಲ್ಲಿ ಗ್ರಾಹಕರಿಂದ ಸ್ವೀಕರಿಸಿದ ಅಹವಾಲುಗಳ ಮತ್ತು ಅವುಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ವಿವರ ಈ ಕೆಳಗಿನಂತೆ ಇರುವುದು.

| | |
|---|---|
| **ಅಹವಾಲು ಸಂಖ್ಯೆ:** | **01 / 25.10.2021** |
| **ಸ್ಥಾವರ ಸಂಖ್ಯೆ:** | **HTM27** |
| ಗ್ರಾಹಕರ ಹೆಸರು: | ಸೈಯದ್ ಅಕ್ಬರ್ ಪಾಷಾ |
| ಮೊಬೈಲ್ ನಂಬರ್ | 9448381797 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ಮಾನ್ವಿ ಉಪವಿಭಾಗ |
| ಅಹವಾಲು | ಈ ಸ್ಥಾವರಕ್ಕೆ 95-96 ನೇ ಸಾಲಿನಲ್ಲಿ ವಿದ್ಯುತ್ ಸೌಲಭ್ಯ ಪಡೆಯಲಾಗಿದೆ, ಅಲ್ಲಿಂದ ಇಲ್ಲಿಯವರೆಗೂ ಈ ಲೈನ್ ತುಂಬಾ ಹಳೆಯದಾಗಿದ್ದು, ಈ ಲೈನ್ ನಲ್ಲಿರುವ ವಯರ್ ಪದೇಪದೆ ಹರಿದುಬೀಳುತ್ತಿದೆ ಇದರಿಂದಾಗಿ ಇಲ್ಲಿ ತಿರುಗಾಡುವ ಜನ ಜಾನುವಾರುಗಳಿಗೆ ವಿದ್ಯುತ್ ಅಪಘಾತಗಳಾಗಿವೆ. ಹಾಗಾಗಿ ತಕ್ಷಣವೇ ಈ ಹಳೆಯದಾದ ಲೈನನ್ನು ತೆಗೆದು, ಮುರಿದ ಶಿಥಿಲಗೊಂಡಿರುವ ಕಂಬಗಳನ್ನು ತೆಗೆದು ಸರಿಪಡಿಸಿ, ಒಟ್ಟಾರೆಯಾಗಿ ಲೈನನ್ನು ಸುಸ್ಥಿತಿಯಲ್ಲಿ ಇಡಲು, ಗ್ರಾಹಕರು ಮನವಿ ಮಾಡಿರುತ್ತಾರೆ. |
| ಕ್ರಮ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಮಾನ್ವಿ ಉಪ ವಿಭಾಗ ಅವರಿಗೆ ಈ ಲೈನನ್ನು ತಕ್ಷಣವೇ ಪರಿಶೀಲಿಸಿ, ಹಳೆಯ ವಯರನ್ನು ತೆಗೆದು ಹೊಸ ವೈರ್ ಹಾಕಲು ಮತ್ತು ಶಿಥಿಲಗೊಂಡಿರುವ ಕಂಬಗಳನ್ನು ತೆಗೆದು ಹೊಸ ಕಂಬಗಳನ್ನು ಹಾಕಲು ಅಂದಾಜು ಪಟ್ಟಿಯನ್ನು ಸಲ್ಲಿಸಿ ಮಂಜೂರಾತಿ ಪಡೆದು ತಕ್ಷಣವೇ ಕಾಮಗಾರಿಯನ್ನು ಪ್ರಾರಂಭಿಸಲು ಸೂಚಿಸಲಾಯಿತು. |

| | |
|---|---|
| **ಅಹವಾಲು ಸಂಖ್ಯೆ:** | **02 / 25.10.2021** |
| **ಸ್ಥಾವರ ಸಂಖ್ಯೆ:** | **HTM40** |
| ಗ್ರಾಹಕರ ಹೆಸರು: | ಸೈಯದ್ ಅಕ್ಬರ್ ಪಾಷಾ |
| ಮೊಬೈಲ್ ನಂಬರ್ | 9448381797 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ಮಾನ್ವಿ ಉಪವಿಭಾಗ |
| ಅಹವಾಲು | ಈ ಸ್ಥಾವರಕ್ಕೆ ಲೋಡ್ ರಿಡಕ್ಷನ್ ಮಾಡಲು ನಾನು ಸುಮಾರು 1 ವರ್ಷದಿಂದ ಮೌಖಿಕವಾಗಿ ಕೋರುತ್ತಿದ್ದೇನೆ ಆದರೆ ಈವರೆಗೂ ಲೋಡ್ ರಿಡಕ್ಷನ್ ಆಗಿರುವುದಿಲ್ಲ. ನಾನು ಅನವಶ್ಯಕವಾಗಿ ಹೆಚ್ಚಿನ ಕನಿಷ್ಠ ಶುಲ್ಕವನ್ನು ಪಾವತಿ ಮಾಡುತ್ತಿದ್ದೇನೆ. ಹಾಗಾಗಿ ತಕ್ಷಣವೇ ನನಗೆ ಲೋಡ್ ರಿಡಕ್ಷನ್ ಮಾಡಿಸಿ ಅನುಕೂಲ ಮಾಡಿಕೊಡಿ ಎಂದು ಮನವಿ ಮಾಡಿದರು. |
| ಕ್ರಮ | ಗ್ರಾಹಕರು ತಮ್ಮ ಸ್ಥಾವರಕ್ಕೆ ಲೋಡ್ ರಿಡಕ್ಷನ್ ಮಾಡಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಮೌಖಿಕವಾಗಿ ಕೋರಲಾಗಿದೆ ಎಂದು ತಿಳಿಸಿರುತ್ತಾರೆ, ಈ ಕಾರಣಕ್ಕಾಗಿ ಲೋಡ್ ರಿಡಕ್ಷನ್ ಮಾಡದೇ ಇರುವುದು ಸಭೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನಾ ಉಪವಿಭಾಗ ಜೆಸ್ಕಾಂ ಮಾನ್ವಿ ರವರು ತಿಳಿಸಿದರು, ಗ್ರಾಹಕರಿಗೆ ಲೋಡ್ ರಿಡಕ್ಷನ್ ಮಾಡಲು ಮೊದಲು ಅರ್ಜಿ ಸಲ್ಲಿಸಲು ಸೂಚಿಸಲಾಯಿತು ಮತ್ತು ಸಲ್ಲಿಸಿದ ತಕ್ಷಣವೇ ಕಂಪನಿಯ ನಿಯಮನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಹಕರಿಗೆ ವಿವರಿಸಲಾಯಿತು ಮತ್ತು ಗ್ರಾಹಕರು ಅರ್ಜಿಯನ್ನು ನೋಂದಾಯಿಸುವದಾಗಿ ತಿಳಿಸಿದರು. |

| ಅಹವಾಲು ಸಂಖ್ಯೆ: | 03 / 25.10.2021 |
|---|---|
| **ಸ್ಥಾವರ ಸಂಖ್ಯೆ:** | **HTD39** |
| ಗ್ರಾಹಕರ ಹೆಸರು: | ಸೈಯದ್ ಅಕ್ಬರ್ ಪಾಷಾ |
| ಮೊಬೈಲ್ ನಂಬರ್ | 9448381797 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ದೇವದುರ್ಗ ಉಪ ವಿಭಾಗ |
| ಅಹವಾಲು | ನಮ್ಮ ಈ ಸ್ಥಾವರಕ್ಕೆ ದಿನಾಲು 3 ರಿಂದ 4 ತಾಸುಗಳು ಮಾತ್ರವೇ ವಿದ್ಯುತ್ ಪೂರೈಕೆ ಆಗುತ್ತಿದೆ ಇದರಿಂದಾಗಿ ನಮ್ಮ ಸ್ಟೋನ್ ಕ್ರಷರ್ ನಲ್ಲಿ ಪ್ರೊಡಕ್ಷನ್ ತುಂಬಾ ಕಡಿಮೆಯಾಗುತ್ತಿದೆ, ಇದರಿಂದ ಆರ್ಥಿಕ ನಷ್ಟ ಆಗುತ್ತಿದೆ ಹಾಗಾಗಿ ನಿರಂತರವಾಗಿ ವಿದ್ಯುತ್ ಪೂರೈಸಲು ಕೋರಿದರು. |
| ಕ್ರಮ | ಕಾರ್ಯ ಮತ್ತು ಪಾಲನಾ ಉಪವಿಭಾಗ ಜೆಸ್ಕಾಂ ದೇವದುರ್ಗ ಅವರಿಗೆ ಈ ಸ್ಥಾವರಕ್ಕೆ ಭೇಟಿ ಕೊಟ್ಟು ಏಕೆ ಇವರಿಗೆ ದಿನಕ್ಕೆ ಕೇವಲ 3 ರಿಂದ 4 ತಾಸುಗಳು ಮಾತ್ರವೇ ವಿದ್ಯುತ್ ಪೂರೈಸಲಾಗುತ್ತಿದೆ ಎನ್ನುವುದನ್ನು ಪರಿಶೀಲಿಸಿ, ಕಾರಣವನ್ನು ತಿಳಿದುಕೊಂಡು ಆ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು ಮತ್ತು ಕೈಗೊಂಡ ಕ್ರಮದ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು. |

| ಅಹವಾಲು ಸಂಖ್ಯೆ: | 04 / 25.10.2021 |
|---|---|
| **ಸ್ಥಾವರ ಸಂಖ್ಯೆ:** | **HTM16** |
| ಗ್ರಾಹಕರ ಹೆಸರು: | ಸುಧಾಕರ್ ತಂದೆ ವೀರಭದ್ರರಾವ್ |
| ಮೊಬೈಲ್ ನಂಬರ್ | 9448190348 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ಮಾನ್ವಿ ಉಪವಿಭಾಗ |
| ಅಹವಾಲು | 2020 ನೇ ಸಾಲಿನಲ್ಲಿ ಚೆಕ್ ಬೌನ್ಸ್ ಆಗಿ 4 ಸಾವಿರ ರೂಪಾಯಿಗಳ ದಂಡ ವಿಧಿಸಿರುತ್ತಾರೆ, ನನ್ನ ಖಾತೆಯಲ್ಲಿ ಸಾಕಷ್ಟು ಹಣವಿದ್ದರೂ ಕೂಡ ಬ್ಯಾಂಕ್ ನವರ ಮಷಿನ್ ನಲ್ಲಿ ಸಮಸ್ಯೆ ಇರುವುದರಿಂದ ಜೆಸ್ಕಾಂ ನಿಂದ ನಮಗೆ ದಂಡ ವಿಧಿಸಿರುತ್ತಾರೆ ಇದು ನ್ಯಾಯಯುತವಾದ ದಂಡವಲ್ಲ ಇದನ್ನು ತಕ್ಷಣವೇ ತೆಗೆಯಬೇಕು ಎಂದು ಕೋರಿದರು ಮತ್ತು ಪ್ರತಿ ತಿಂಗಳು ಒಂದನೇ ತಾರೀಕಿನಂದು ನಮಗೆ ವಿದ್ಯುತ್ ಬಿಲ್ ನೀಡುತ್ತಿಲ್ಲ ಎಂದು ತಿಳಿಸಿದರು. |
| ಕ್ರಮ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪವಿಭಾಗ ಜೆಸ್ಕಾಂ ಮಾನ್ವಿ ಇವರಿಗೆ ಮತ್ತು ಸಹಾಯಕ ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನೆ ಮಾನ್ವಿ ಉಪ ವಿಭಾಗ ಇವರಿಗೆ ಈ ಸ್ಥಾವರಕೆ ಹಾಕಿರುವ ದಂಡ ಶುಲ್ಕವನ್ನು ತೆಗೆಯಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿದೆ. |

| | |
|---|---|
| **ಅಹವಾಲು ಸಂಖ್ಯೆ:** | **05 / 25.10.2021** |
| **ಸ್ಥಾವರ ಸಂಖ್ಯೆ:** | **HTR11** |
| ಗ್ರಾಹಕರ ಹೆಸರು: | ವರಲಕ್ಷ್ಮಿ ಇಂಡಸ್ಟ್ರೀಸ್ ವಡವಟ್ಟಿ ರಸ್ತೆ |
| ಮೊಬೈಲ್ ನಂಬರ್ | 9739422692 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ರಾಯಚೂರು ಗ್ರಾಮೀಣ ಉಪ ವಿಭಾಗ |
| ಅಹವಾಲು | ನಮ್ಮ ಈ ಸ್ಥಾವರ ಶಾಶ್ವತ ವಿದ್ಯುತ್ ನಿಲುಗಡೆಗೊಂಡಿತ್ತು ಇದಕ್ಕೆ ಸಂಬಂಧಿಸಿದಂತೆ ತಮ್ಮ ಕಚೇರಿಯಲ್ಲಿ ಇರುವ ಭದ್ರತಾ ಠೇವಣಿ ರೂ 1.45 ಲಕ್ಷ ರಷ್ಟು ಹಣವನ್ನು ಮರುಪಾವತಿಸಲು ಕಳೆದ ಸಭೆಯಲ್ಲಿಯೇ ಕೋರಲಾಗಿತ್ತು ಆದರೆ ಇಲ್ಲಿಯವರೆಗೂ ಹಣ ಪಾವತಿ ಆಗಿರುವುದಿಲ್ಲ ಎಂದು ಅಹವಾಲು ನೀಡಿದರು |
| ಕ್ರಮ | ಈ ವಿಷಯವಾಗಿ ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ ರವರು, ಈ ಕಡತವನ್ನು ಈಗಾಗಲೇ ಪರಿಶೀಲಿಸಲಾಗಿದೆ, ನಿಧಿ ಕೋರಿಕೆಗಾಗಿ ಕೋರಿಕೆಯನ್ನು ನಿಗಮ ಕಚೇರಿಗೆ ಸಲ್ಲಿಸಲಾಗಿದೆ, ನಿಧಿ ವರ್ಗಾವಣೆ ಆದ ನಂತರವೇ ಗ್ರಾಹಕರಿಗೆ ಭದ್ರತಾ ಠೇವಣಿ ಹಣವನ್ನು ಮರು ಪಾವತಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು. |

| | |
|---|---|
| **ಅಹವಾಲು ಸಂಖ್ಯೆ:** | **06 / 25.10.2021** |
| **ಸ್ಥಾವರ ಸಂಖ್ಯೆ:** | **HTM15** |
| ಗ್ರಾಹಕರ ಹೆಸರು: | ಮೆಸರ್ಸ್ ರಾಧೆ ಆಗ್ರೋ ಇಂಡಸ್ಟ್ರೀಸ್ ಮರ್ಚೇಡ್ |
| ಮೊಬೈಲ್ ನಂಬರ್ | 9885599383 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ರಾಯಚೂರು ಗ್ರಾಮೀಣ ಉಪ ವಿಭಾಗ |
| ಅಹವಾಲು | ನಮ್ಮ ಈ ಸ್ಥಾವರವು ಗ್ರಾಮೀಣ ವಿಭಾಗಕ್ಕೆ ಒಳಪಡುತ್ತದೆ ಆದರೆ ಈ ಸ್ಥಾವರಕ್ಕೆ ವಿದ್ಯುತ್ ಪೂರೈಕೆ ನಗರ ವಿಭಾಗದಿಂದ ಆಗುತ್ತದೆ, ನಮ್ಮ ಈ ಲೈನ್ ನಿರ್ವಹಣೆಯನ್ನು ರಾಯಚೂರು ನಗರ ವಿಭಾಗದ ಶಾಖಾಧಿಕಾರಿಗಳು ಮಾಡುತ್ತಾರೆ, ದಿನಕ್ಕೆ ಕನಿಷ್ಠ ನಾಲ್ಕೈದು ಬಾರಿ ವಿದ್ಯುತ್ ಪೂರೈಕೆಯಲ್ಲಿ ಅಡಚಣೆಯಾಗುತ್ತದೆ, ಈ ವಿಷಯವಾಗಿ ನಗರ ಶಾಖಾಧಿಕಾರಿಗಳಿಗೆ ನಾವು ಮಾತನಾಡಿದರೆ ಅವರು ಗ್ರಾಮೀಣ ಶಾಖಾಧಿಕಾರಿಗಳಿಗೆ ಮಾತನಾಡಿ, ನಿಮ್ಮ ಸ್ಥಾವರ ನನಗೆ ಸಂಬಂಧಿಸಿದ್ದು ಅಲ್ಲ ಎಂದು ಹೇಳುತ್ತಾರೆ. ನಮ್ಮ ಈ ಸ್ಥಾವರದಲ್ಲಿ ಸೋಲಾರ್ ರೂಫ್ ಟಾಪ್ ಕೂಡ ಅಳವಡಿಸಿದ್ದು, ಪದೇಪದೆ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಆಗುವುದರಿಂದ ವಿದ್ಯುತ್ ಉತ್ಪಾದನೆಯಲ್ಲಿ ಕೂಡ ಕುಂಠಿತವಾಗಿ ನಮಗೆ ಬರುವ ಆದಾಯದಲ್ಲಿ ಕುಂಠಿತ ಆಗುತ್ತಿರುವುದು. ಹಾಗಾಗಿ ಇದನ್ನು ಗಂಭೀರವಾಗಿ ಪರಿಗಣಿಸಿ ನಮಗೆ ನಿರಂತರವಾಗಿ ವಿದ್ಯುತ್ ಪೂರೈಸಬೇಕು ಎಂದು ಮನವಿ ಮಾಡಿರುತ್ತಾರೆ. |
| ಕ್ರಮ | ನಗರ ಉಪವಿಭಾಗದ ಮತ್ತು ಗ್ರಾಮೀಣ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಈ ಸ್ಥಾವರಕ್ಕೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮೀಣ ಶಾಖಾಧಿಕಾರಿಗಳಿಬ್ಬರಿಗೂ ಕೂಡ ಈ ಸ್ಥಾವರಕ್ಕೆ ವಿದ್ಯುತ್ ಪೂರೈಕೆ ಆಗುವ ಫೀಡರ್ ನಲ್ಲಿ ಏನಾದರೂ ತಾಂತ್ರಿಕ ದೋಷಗಳು ಇದ್ದರೆ ಜಂಗಲ್ ಇದ್ದರೆ ಅದನ್ನು ತೆಗೆಯಲು ತಕ್ಷಣವೇ ಕ್ರಮ ಕೈಗೊಂಡು ನಿರಂತರವಾಗಿ ವಿದ್ಯುತ್ ಪೂರೈಕೆ ಮಾಡಲು ಮತ್ತು ಗ್ರಾಹಕರು ಫೋನ್ ಕರೆ ಮಾಡಿದಾಗ ಸ್ವೀಕರಿಸಿ ಅವರಿಗೆ ಸರಿಯಾಗಿ ಸಭ್ಯತೆಯಿಂದ ಸ್ಪಂದಿಸಲು ಇಬ್ಬರು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |

| | |
|---|---|
| **ಅಹವಾಲು ಸಂಖ್ಯೆ:** | **07 / 25.10.2021** |
| **ಸ್ಥಾವರ ಸಂಖ್ಯೆ:** | **HTM50** |
| ಗ್ರಾಹಕರ ಹೆಸರು: | ಬಾಲಾಜಿ ಕಂಫರ್ಟ್ಸ್ |
| ಮೊಬೈಲ್ ನಂಬರ್ | 9845688088 |
| ವಿಭಾಗ / ಉಪವಿಭಾಗ | ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ / ಮಾನ್ವಿ ಉಪವಿಭಾಗ |
| ಅಹವಾಲು | ನಮ್ಮ ಈ ಸ್ಥಾವರಕ್ಕೆ ಆನ್ ಲೈನ್ ಮುಖಾಂತರ ಬಿಲ್ ನೀಡುತ್ತಿಲ್ಲ ಮತ್ತು ಈ ಸ್ಥಾವರಕ್ಕೆ ಸೋಲಾರ್ ರೂಫ್ಟಾಪ್ ಅಳವಡಿಸಲಾಗಿದೆ ಅದಕ್ಕೂ ಕೂಡ ಬಿಲ್ ನೀಡುತ್ತಿಲ್ಲ ಎಂದು ಅಹವಾಲು ನೀಡಿದರು. |
| ಕ್ರಮ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಸಹಾಯಕ ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನಾ ಉಪವಿಭಾಗ ಜೆಸ್ಕಾಂ ಮಾನ್ವಿ ಅವರಿಗೆ ಕಡ್ಡಾಯವಾಗಿ ಗ್ರಾಹಕರಿಗೆ ಆನ್ ಲೈನ್ ಮುಖಾಂತರವೇ ಬಿಲ್ ನೀಡಲು ಸೂಚಿಸಲಾಯಿತು. 3ದಿನಗಳಲ್ಲಿ ಗ್ರಾಹಕರಿಗೆ ಅವರ ಸ್ಥಾವರದ ಮತ್ತು ರೂಫ್ಟಾಪ್ ಎರಡಕ್ಕೂ ಬಿಲ್ ನೀಡಿ ಅದರ ಪ್ರತಿಯನ್ನು ಈ ಕಚೇರಿಗೆ ಕಳುಹಿಸಲು ನಿರ್ದೇಶಿಸಲಾಯಿತು. |

| | |
|---|---|
| **ಅಹವಾಲು ಸಂಖ್ಯೆ:** | **08 / 25.10.2021** |
| **ಸ್ಥಾವರ ಸಂಖ್ಯೆ:** | **HTRR53** |
| ಗ್ರಾಹಕರ ಹೆಸರು: | ಮಾರುತಿ ಕಾಟನ್ ಇಂಡಸ್ಟ್ರೀಸ್ ಚಿಕ್ಕಸುಗೂರು ಗ್ರೋಥ್ ಸೆಂಟರ್ |
| ಮೊಬೈಲ್ ನಂಬರ್ | 9448288288 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ರಾಯಚೂರು ಗ್ರಾಮೀಣ ಉಪ ವಿಭಾಗ |
| ಅಹವಾಲು | ಈ ವರ್ಷದಲ್ಲಿ ಲೋಡ್ ರಿಡಕ್ಷನ್ ಮಾಡುವ ಮೂಲಕ 1 ಬಾರಿ ಸೀಸನಲ್ ಬೆನಿಫಿಟ್ ತೆಗೆದುಕೊಂಡಿದ್ದೇವೆ, ಈಗ ಇನ್ನೂ 6 ತಿಂಗಳಿಗೆ ಸೀಜನಲ್ ಬೆನಿಫಿಟ್ ಅನ್ನು ಮುಂದುವರಿಸಲು ಕೋರಿರುತ್ತಾರೆ. ಇದರ ಜೊತೆಯಲ್ಲಿ ನಮ್ಮ ಸ್ಥಾವರದಲ್ಲಿ ಇರುವ 2 PT 2 CT ಮೀಟರಿಂಗ್ ಕ್ಯೂಬಿಕಲ್ ತೆಗೆದು 3 ಫೇಜ್ 4 ವೈಯರ್ ಮೀಟರಿಂಗ್ ಕ್ಯೂಬಿಕಲ್ ಅಳವಡಿಸಲು ಕೋರಿರುತ್ತಾರೆ. |
| ಕ್ರಮ | ವರ್ಷದಲ್ಲಿ 1 ಬಾರಿ ಮಾತ್ರ ಸೀಸನಲ್ ಬೆನಿಫಿಟ್ ತೆಗೆದುಕೊಳ್ಳಲು ಅವಕಾಶ ಇದೆ, ಹಾಗಾಗಿ ಮತ್ತೊಮ್ಮೆ ಸೀಜನಲ್ ಬೆನಿಫಿಟ್ ತಮಗೆ ನೀಡಲು ಸಾಧ್ಯ ಆಗುವುದಿಲ್ಲ ಎಂದು ಗ್ರಾಹಕರಿಗೆ ತಿಳಿಸಲಾಯಿತು ಮತ್ತು ಇವರ ಸ್ಥಾವರಕ್ಕೆ ಇರುವ ಮೀಟರಿಂಗ್ 2 CT 2 PT ಕ್ಯೂಬಿಕಲ್ ತೆಗೆದು 3 ಫೇಜ್ 4 ವೈಯರ್ ಮೀಟರಿಂಗ್ ಕ್ಯೂಬಿಕಲ್ ಅಳವಡಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗ ರಾಯಚೂರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹೆಚ್.ಟಿ ರೇಟಿಂಗ್ ಉಪವಿಭಾಗ ಜೆಸ್ಕಾಂ ರಾಯಚೂರು ಅವರಿಗೆ ಸೂಚಿಸಲಾಯಿತು. |

| | |
|---|---|
| **ಅಹವಾಲು ಸಂಖ್ಯೆ:** | **09 / 25.10.2021** |
| **ಸ್ಥಾವರ ಸಂಖ್ಯೆ:** | **HTR140** |
| ಗ್ರಾಹಕರ ಹೆಸರು: | ಶ್ರೀ ಲಕ್ಷ್ಮಿ ವೆಂಕಟಾದ್ರಿ ಆಗ್ರೋ ಇಂಡಸ್ಟ್ರೀಸ್ ಮಂಚಲಾಪುರ ರಸ್ತೆ |
| ಮೊಬೈಲ್ ನಂಬರ್ | 9480713636 |
| ವಿಭಾಗ / ಉಪವಿಭಾಗ | ರಾಯಚೂರು ನಗರ ವಿಭಾಗ / ರಾಯಚೂರು ಉಪ ವಿಭಾಗ-2 |
| ಅಹವಾಲು | ನಮ್ಮ ಸ್ಥಾವರಕ್ಕೆ ಇರುವ 62 ಲಕ್ಷ ಬಾಕಿಯನ್ನು ಪಾವತಿಸಿಕೊಳ್ಳಲು ಯಾವುದೇ ನೋಟಿಸ್ ನೀಡದೆ ಡಿಸ್ ಕನೆಕ್ಷನ್ ಮಾಡಲು ಬಂದಿರುವ ಬಗ್ಗೆ ದೂರು ನೀಡಿದರು. |
| ಕ್ರಮ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರಾಯಚೂರು ನಗರ ಉಪವಿಭಾಗ-2 ಇವರಿಗೆ ಈ ಸ್ಥಾವರದ ಬಾಕಿಯನ್ನು ವಸೂಲಿ ಮಾಡಲು ಕಂಪೆನಿಯ ನಿಯಮಾನುಸಾರವೇ ನೋಟಿಸ್ ಗಳನ್ನು ನೀಡಿ ಬಾಕಿಯನ್ನು ವಸೂಲಿ ಮಾಡಲು ಸೂಚಿಸಲಾಯಿತು |

| | |
|---|---|
| **ಅಹವಾಲು ಸಂಖ್ಯೆ:** | **10 / 25.10.2021** |
| **ಸ್ಥಾವರ ಸಂಖ್ಯೆ:** | **HTD 16 & HTD 10** |
| ಗ್ರಾಹಕರ ಹೆಸರು: | ಸಂದೀಪ್ ಜಿನ್ನಿಂಗ್ ಫ್ಯಾಕ್ಟರಿ ದೇವದುರ್ಗ , ಎಸ್ ಬಿ ಆಗ್ರೋ ಇಂಡಸ್ಟ್ರೀಸ್ ದೇವದುರ್ಗ |
| ಮೊಬೈಲ್ ನಂಬರ್ | 9448148429, 9448380034 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ದೇವದುರ್ಗ ಉಪ ವಿಭಾಗ |
| ಅಹವಾಲು | ಈ ಮೊದಲು ನಮ್ಮ ಸ್ಥಾವರಕ್ಕೆ ಹೂವಿನಹಡಗಲಿ ವಾಟರ್ ಸಪ್ಲೈ ಎಕ್ಸ್ ಪ್ರೆಸ್ ಫೀಡರ್ ಗೆ ನಮ್ಮ ಸ್ಥಾವರ ಕನೆಕ್ಟ್ ಆಗಿತ್ತು ಆದರೆ ಈಗ ಆ ಲೈನ್ ನಿಂದ ನಮ್ಮ ಸ್ಥಾವರವನ್ನು ತೆಗೆದು ದೇವದುರ್ಗ ನಗರ ಫೀಡರ್ ಗೆ ಕನೆಕ್ಟ್ ಮಾಡಿರುತ್ತಾರೆ ಹಾಗೆ ಮಾಡಿದಾಗಿನಿಂದ ನಮ್ಮ ಸ್ಥಾವರಕ್ಕೆ ಹೆಚ್ಚಿನ ವಿದ್ಯುತ್ ಅಡಚಣೆ ಆಗುತ್ತಿದೆ ಇದನ್ನು ಕಡಿಮೆ ಮಾಡಬೇಕು ಎಂದು ಮನವಿ ಮಾಡಿದರು. |
| ಕ್ರಮ | ಹೂವಿನ ಹಡಗಲಿ ಗ್ರಾಮದಲ್ಲಿ ಇದ್ದ ವಾಟರ್ ಸಪ್ಲೈ ಸ್ಥಾವರ ಈಗ ಬಳಕೆಯಲ್ಲಿ ಇರುವುದಿಲ್ಲ ಹಾಗಾಗಿ ಹಾಗಾಗಿ ಆ ಫೀಡರ್ ರನ್ನು ದೇವದುರ್ಗ ನಗರ ಫೀಡರ್ ಆಗಿ ಪರಿವರ್ತನೆ ಮಾಡಿಕೊಳ್ಳಲಾಗಿದೆ, ಈ ಫೀಡರ್ ನಲ್ಲಿ ಯಾವುದೇ ತಾಂತ್ರಿಕ ದೋಷ ಇರುವುದಿಲ್ಲ, ಬದಲಾಗಿ ದೇವದುರ್ಗ 110 ಕೆವಿ ಸಬ್ ಸ್ಟೇಶನ್ ನಲ್ಲಿ ಯಾವುದೇ 11 ಕೆವಿ ಲೈನ್ ಫಾಲ್ಟ್ ಬಂದರೂ ಮೊದಲು ಫೀಡರ್ ಟ್ರಿಪ್ ಆಗುವ ಬದಲು ಬ್ಯಾಂಕ್ ಟ್ರಿಪ್ ಆಗುತ್ತದೆ ಮತ್ತು ಇದರ ಜೊತೆಯಲ್ಲಿ ಬಹಳಷ್ಟು ಬಾರಿ ಮೇನ್ ಸಪ್ಲೈ ವಿಫಲ ಆಗುತ್ತಿರುವುದರಿಂದ, ಒಟ್ಟಾರೆಯಾಗಿ ಇವರಿಗೆ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಆಗಿದೆ, ಹಾಗಾಗಿ ಸಬ್ ಸ್ಟೇಶನ್ ನಲ್ಲಿ ಫೀಡರ್ ಬದಲು ಬ್ಯಾಂಕ್ ಟ್ರಿಪ್ ಆಗುವುದನ್ನು ತಪ್ಪಿಸಲು ಮತ್ತು ಪದೇ ಪದೇ ಮೇನ್ ಸಪ್ಲೈ ಟ್ರಿಪ್ ಆಗುವುದನ್ನು ತಡೆಯಲು ಕ್ರಮ ಕೈಗೊಳ್ಳಬೇಕು ಎಂದು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ ಜೆಸ್ಕಾಂ ದೇವದುರ್ಗ ರವರು ಸಭೆಯಲ್ಲಿ ವಿವರಿಸಿದರು.<br><br>ಈ ವಿಷಯವಾಗಿ ಕಾರ್ಯನಿರ್ವಾಹಕ ಅಭಿಯಂತರರು 220 ಕೆವಿ ರಿಸಿವಿಂಗ್ ಸ್ಟೇಷನ್ ಕೆಪಿಟಿಸಿಎಲ್ ರಾಯಚೂರು ಅವರಿಗೆ, 110 ಕೆ ವಿ ಸಬ್ ಸ್ಟೇಷನ್ ದೇವದುರ್ಗದಲ್ಲಿ ಎಲ್ಲಾ 11 ಕೆವಿ ಬ್ಯಾಂಕ್ ನಲ್ಲಿರುವ ರಿಲೇ ಗಳನ್ನು ಕ್ಯಾಲಿಬ್ರೇಷನ್ ಮಾಡಿಸಿ, ಇನ್ಯಾವುದೇ ಸಮಸ್ಯೆ ಇದ್ದರೂ ಅದನ್ನು ಸರಿಪಡಿಸಿ, 11 ಕೆವಿ ಲೈನ್ ಫಾಲ್ಟ್ ಗಳಿಗೆ ಬ್ಯಾಂಕ್ ಟ್ರಿಪ್ ಆಗುವ ಬದಲು ಕೇವಲ ಸಂಬಂಧಿಸಿದ 11 ಕೆವಿ ಫೀಡರ್ ಮಾತ್ರ ಟ್ರಿಪ್ ಆಗುವ ರೀತಿಯಲ್ಲಿ ಕ್ರಮ ಕೈಗೊಳ್ಳಲು ಕೋರಲಾಯಿತು. |

| | |
|---|---|
| **ಅಹವಾಲು ಸಂಖ್ಯೆ:** | **11 / 25.10.2021** |
| **ಸ್ಥಾವರ ಸಂಖ್ಯೆ:** | **HTD21** |
| ಗ್ರಾಹಕರ ಹೆಸರು: | ವಿಶ್ವಾರಾಧ್ಯ ಕಾಟನ್ ಜಿನ್ನಿಂಗ್ ದೇವದುರ್ಗ |
| ಮೊಬೈಲ್ ನಂಬರ್ | 9731494222 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ದೇವದುರ್ಗ ಉಪ ವಿಭಾಗ |
| ಅಹವಾಲು | ಆಂತರಿಕ ಲೆಕ್ಕ ಪರಿಶೋಧನೆ ಅವರು ನನ್ನ ಸ್ಥಾವರಕ್ಕೆ ಅನವಶ್ಯಕವಾಗಿ 1.42 ಲಕ್ಷ ಗಳಷ್ಟು ಆಡಿಟ್ ಶಾರ್ಟ್ ಕ್ಲೈಮ್ ಹಾಕಿ ತೊಂದರೆ ಮಾಡಿದ್ದು ಇದನ್ನು ಹಿಂಪಡೆಯಲು ಮನವಿ ಮಾಡಿದರು. |
| ಕ್ರಮ | ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ ಜೆಸ್ಕಾಂ ರಾಯಚೂರು ಮತ್ತು ಸಹಾಯಕ ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನೆ ಉಪವಿಭಾಗ ಜೆಸ್ಕಾಂ ದೇವದುರ್ಗ ಅವರಿಗೆ ಈ ವಿಷಯವಾಗಿ, ಆಂತರಿಕ ಪರಿಶೋಧನೆ ಅವರು ವಿಧಿಸಿರುವ ಆಡಿಟ್ ಶಾರ್ಟ್ ಕ್ಲೈಮ್ ಮೊತ್ತ ವನ್ನು ಮತ್ತೊಮ್ಮೆ ಪರಿಶೀಲಿಸಿ, ಸರಿಯಾಗಿದ್ದರೆ ಕಂಪೆನಿಯ ನಿಯಮನುಸಾರ ಗ್ರಾಹಕರಿಗೆ ನೋಟಿಸ್ ಜಾರಿ ಮಾಡಿ ಅವರಿಂದ ಉತ್ತರವನ್ನು ಪಡೆದು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |

| | |
|---|---|
| **ಅಹವಾಲು ಸಂಖ್ಯೆ:** | **12 / 25.10.2021** |
| **ಸ್ಥಾವರ ಸಂಖ್ಯೆ:** | **3531586256** |
| ಗ್ರಾಹಕರ ಹೆಸರು: | ವಿಶ್ವಜ್ಯೋತಿ ಕಾಟನ್ ಮಿಲ್ ರಾಯಚೂರು ನಗರ |
| ಮೊಬೈಲ್ ನಂಬರ್ | 9035649999 |
| ವಿಭಾಗ / ಉಪವಿಭಾಗ | ರಾಯಚೂರು ನಗರ ವಿಭಾಗ / ರಾಯಚೂರು ಉಪ ವಿಭಾಗ -2 |
| ಅಹವಾಲು | ಈ ತಿಂಗಳು ಈ ದಿನಾಂಕದ ವರೆಗೂ ನಮ್ಮ ಸ್ಥಾವರದ ಬಿಲ್ ನಮಗೆ ಬಂದಿರುವುದಿಲ್ಲ ಎಂದು ದೂರು ನೀಡಿದರು |
| ಕ್ರಮ | ಪ್ರತಿ ತಿಂಗಳು ಒಂದನೇ ತಾರೀಕಿನಂದು ಈ ಸ್ಥಾವರಕ್ಕೆ ಬಿಲ್ ವಿತರಿಸಬೇಕು ಮುಂದಿನ ದಿನಗಳಲ್ಲಿ ಈ ರೀತಿ ವಿಳಂಬ ಆದರೆ ಸಂಬಂಧಿಸಿದವರಿಗೆ ಸೂಕ್ತ ಶಿಸ್ತಿನ ಕ್ರಮ ತೆಗೆದು ಕೊಳ್ಳಲಾಗುವುದು ಎಂದು ಸಭೆಯಲ್ಲಿ ಸೂಚಿಸುತ್ತ ಸಭೆ ಮುಕ್ತಾಯ ಆದ ತಕ್ಷಣವೇ ಬಿಲ್ ವಿತರಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ ರಾಯಚೂರು ಇವರಿಗೆ ಸೂಚಿಸಲಾಯಿತು. |

| **ಅಹವಾಲು ಸಂಖ್ಯೆ:** | **13 / 25.10.2021** |
|---|---|
| **ಸ್ಥಾವರ ಸಂಖ್ಯೆ:** | **HTM6** |
| ಗ್ರಾಹಕರ ಹೆಸರು: | ಆಂಜನೇಯ ಆಗ್ರೊ ಇಂಡಸ್ಟ್ರೀಸ್ ಮಾನ್ವಿ |
| ಮೊಬೈಲ್ ನಂಬರ್ | 8050223301 / 7029653767 |
| ವಿಭಾಗ / ಉಪವಿಭಾಗ | ರಾಯಚೂರು ಗ್ರಾಮೀಣ ವಿಭಾಗ / ಮಾನ್ವಿ ಉಪವಿಭಾಗ |
| ಅಹವಾಲು | ನಮ್ಮ ಸ್ಥಾವರಕ್ಕೆ ಬಿಲ್ಲನ್ನು ವಿಳಂಬವಾಗಿ ನೀಡುತ್ತಿದ್ದಾರೆ ಇದಕ್ಕೆ ಕಾರಣ ಕೇಳಿದರೆ ಮೀಟರ್ ಡಿಸ್ಪ್ಲೆ ಸರಿಯಾಗಿ ಆಗುತ್ತಿಲ್ಲ ಎಂದು ತಿಳಿಸುತ್ತಿದ್ದಾರೆ ಈ ಸಮಸ್ಯೆಯನ್ನು ಬಗೆಹರಿಸಿ ಎಂದು ಮನವಿ ಮಾಡಿದರು. |
| ಕ್ರಮ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಚ್ ಟಿ ರೇಟಿಂಗ್ ಉಪವಿಭಾಗ ಜೆಸ್ಕಾಂ ರಾಯಚೂರು ಅವರು ಈ ಸ್ಥಾವರದ ಮೀಟರ್ ಡಿಸ್ ಪ್ಲೇ ಯಲ್ಲಿ ದೋಷ ಇದ್ದು ಮೀಟರ್ ಬದಲಾವಣೆ ಮಾಡುವುದು ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ ಜೆಸ್ಕಾಂ ಮಾನ್ವಿ ಅವರಿಗೆ ತಕ್ಷಣವೇ ದೋಷಪೂರಿತ ಮಾಪಕ ವನ್ನು ತೆಗೆದು ಚೆನ್ನಾಗಿರುವ ಮಾಪಕವನ್ನು ಅಳವಡಿಸಲು ಸಭೆಯಲ್ಲಿ ಸೂಚಿಸಲಾಯಿತು. |

| **ಅಹವಾಲು ಸಂಖ್ಯೆ:** | **14 / 25.10.2021** |
|---|---|
| **ಸ್ಥಾವರ ಸಂಖ್ಯೆ:** | **HTR78** |
| **ಗ್ರಾಹಕರ ಹೆಸರು:** | **ಕೆಕೆಆರ್ಟಿಸಿ, ಆರ್ ಟಿಒ ವೃತ್ತ ರಾಯಚೂರು** |
| ಮೊಬೈಲ್ ನಂಬರ್ | 9886418623 |
| ವಿಭಾಗ / ಉಪವಿಭಾಗ | ರಾಯಚೂರು ನಗರ ವಿಭಾಗ / ರಾಯಚೂರು ಉಪವಿಭಾಗ-1 |
| ಅಹವಾಲು | ಕಳೆದ 4 ವರ್ಷಗಳಿಂದ ನಮ್ಮ ಸ್ಥಾವರಕ್ಕೆ ಕಡಿಮೆ ವೋಲ್ಟೇಜ್ ಪೂರೈಕೆಯಾಗುತ್ತಿದೆ ಇದನ್ನು ಸರಿಪಡಿಸಿ ಎಂದು ಮನವಿ ಮಾಡಿದರು. |
| ಕ್ರಮ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ 1 ರಾಯಚೂರು ಇವರು, ಈ ಸ್ಥಾವರಕ್ಕೆ ಮಲಿಯಾಬಾದ್ 110 ಕೆವಿ ಸಬ್ ಸ್ಟೇಶನ್ ನಿಂದ ವಿದ್ಯುತ್ ಪೂರೈಕೆ ಆಗುತ್ತದೆ, ಬೆಳಗಿನ ಸಮಯದಲ್ಲಿ ಪಂಪ್ಸೆಟ್ ಲೋಡ್ ಇದ್ದಾಗ ಇವರಿಗೆ ವೋಲ್ಟೇಜ್ ನಲ್ಲಿ ಕೊರತೆ ಉಂಟಾಗುತ್ತದೆ ಪಂಪ್ ಸೆಟ್ ಸಂಜೆ ಕಡಿಮೆ ಆದ ಮೇಲೆ ಫ್ಲೋರ್ಟಿಸ್ ಜಾಸ್ತಿಯಾಗುತ್ತದೆ ಇದರಿಂದಾಗಿ ಅವರ ಉಪಕರಣಗಳು ಸರಿಯಾಗಿ ಕಾರ್ಯ ನಿರ್ವಹಿಸುವುದಿಲ್ಲ ಈ ಸಮಸ್ಯೆ ಕಳೆದ 4 ವರ್ಷಗಳಿಂದಲೂ ಇದೆ, ಇದಕ್ಕೆ ಪರಿಹಾರವಾಗಿ ತಮ್ಮ ಸ್ಥಾವರದಲ್ಲಿ ವೋಲ್ಟೇಜ್ ಸಮಸ್ಯೆ ಆಗುತ್ತಿರುವ ಉಪಕರಣಗಳಿಗೆ ವೋಲ್ಟೇಜ್ ಸ್ಟೆಬಿಲೈಸರ್ ಗಳನ್ನು ಅಳವಡಿಸಲು ಸಲಹೆ ಮಾಡಲಾಗಿದೆ. ರಾಯಚೂರು ನಗರ ವ್ಯಾಪ್ತಿಯಲ್ಲಿ ಆಶಾಪುರ ರಸ್ತೆಯಲ್ಲಿನ ಹೊಸದಾಗಿ 110 ಕೆವಿ ಸಬ್ ಸ್ಟೇಷನ್ ಪ್ರಸ್ತಾವನೆ ಸಲ್ಲಿಸಲಾಗಿದೆ, ಆ ಸಬ್ ಸ್ಟೇಷನ್ ಅನುಷ್ಠಾನಗೊಂಡ ಮೇಲೆ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ಕೂಡ ಅವರಿಗೆ ತಿಳಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು. |

| | |
|---|---|
| **ಅಹವಾಲು ಸಂಖ್ಯೆ:** | **15 / 25.10.2021** |
| **ಸ್ಥಾವರ ಸಂಖ್ಯೆ:** | **HTR154** |
| ಗ್ರಾಹಕರ ಹೆಸರು: | ಅಜಯ್ ರೈಸ್ ಮಿಲ್ ಗದ್ವಾಲ್ ರಸ್ತೆ ರಾಯಚೂರು |
| ಮೊಬೈಲ್ ನಂಬರ್ | 9482169859 |
| ವಿಭಾಗ / ಉಪವಿಭಾಗ | ರಾಯಚೂರು ನಗರ ವಿಭಾಗ / ರಾಯಚೂರು ಉಪವಿಭಾಗ-2 |
| ಅಹವಾಲು | ನಮ್ಮ ಸ್ಥಾವರಕ್ಕೆ ಶಾಶ್ವತ ವಿದ್ಯುತ್ ಕಡಿತವಾಗಿದ್ದು ಆ ಸ್ಥಾವರಕ್ಕೆ ಇದ್ದ ಭದ್ರತಾ ಠೇವಣಿ ಹಣವನ್ನು ನನ್ನದೇ ಮತ್ತೊಂದು ಸ್ಥಾವರಕ್ಕೆ ಹೊಂದಾಣಿಕೆ ಮಾಡಲು ಕಳೆದ ಸಭೆಯಲ್ಲಿಯೇ ನಾನು ಕೋರಿದ್ದೆ ಆದರೆ ಈವರೆಗೂ ಅದು ಆಗಿಲ್ಲ ಎಂಬ ದೂರು ನೀಡಿದರು. |
| ಕ್ರಮ | ಈ ಸ್ಥಾವರಕ್ಕೆ ಸಂಬಂಧಿಸಿದಂತೆ ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನೆ ನಗರ ವಿಭಾಗ ರವರು ಈಗಾಗಲೇ ಸೂಕ್ತ ಕ್ರಮವನ್ನು ಕೈಗೊಂಡಿದ್ದೇವೆ, ಇನ್ನೆರಡು ದಿನಗಳಲ್ಲಿ ಆ ಭದ್ರತಾ ಠೇವಣಿ ಹಣವನ್ನು ಇವರದೇ ಇನ್ನೊಂದು ಸ್ಥಾವರಕ್ಕೆ ಹೊಂದಾಣಿಕೆ ಮಾಡುತ್ತೇವೆ ಎಂದು ಸಭೆಯಲ್ಲಿ ತಿಳಿಸಿದರು. |

| | |
|---|---|
| **ಅಹವಾಲು ಸಂಖ್ಯೆ:** | **16/ 25.10.2021** |
| **ಸ್ಥಾವರ ಸಂಖ್ಯೆ:** | **HTR 132** |
| ಗ್ರಾಹಕರ ಹೆಸರು: | ಶ್ರೀ ಲಕ್ಷ್ಮಿನಾರಾಯಣ ಇಂಡಸ್ಟ್ರೀಸ್ ರಾಯಚೂರು ನಗರ. |
| ಮೊಬೈಲ್ ನಂಬರ್ | 9845546647 |
| ವಿಭಾಗ / ಉಪವಿಭಾಗ | ರಾಯಚೂರು ನಗರ ವಿಭಾಗ / ರಾಯಚೂರು ಉಪವಿಭಾಗ-2 |
| ಅಹವಾಲು | ನಮ್ಮ ಸ್ಥಾವರಕ್ಕೆ ಶಾಶ್ವತ ವಿದ್ಯುತ್ ಕಡಿತವಾಗಿದ್ದು ಆ ಸ್ಥಾವರಕ್ಕೆ ಇದ್ದ ಭದ್ರತಾ ಠೇವಣಿ ಹಣವನ್ನು ನನ್ನದೇ ಮತ್ತೊಂದು ಸ್ಥಾವರಕ್ಕೆ ಹೊಂದಾಣಿಕೆ ಮಾಡಲು ಕಳೆದ ಸಭೆಯಲ್ಲಿಯೇ ನಾನು ಕೋರಿದ್ದೆ ಆದರೆ ಈವರೆಗೂ ಅದು ಆಗಿಲ್ಲ ಎಂಬ ದೂರು ನೀಡಿದರು. |
| ಕ್ರಮ | ಈ ಸ್ಥಾವರಕ್ಕೆ ಸಂಬಂಧಿಸಿದಂತೆ ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನೆ ನಗರ ವಿಭಾಗ ರವರು ಈಗಾಗಲೇ ಸೂಕ್ತ ಕ್ರಮವನ್ನು ಕೈಗೊಂಡಿದ್ದೇವೆ ಇನ್ನೆರಡು ದಿನಗಳಲ್ಲಿ ಆ ಭದ್ರತಾ ಠೇವಣಿ ಹಣವನ್ನು ಇವರದೇ ಸ್ಥಾವರಕ್ಕೆ ಹೊಂದಾಣಿಕೆ ಮಾಡುತ್ತೇವೆ ಎಂದು ಸಭೆಯಲ್ಲಿ ತಿಳಿಸಿದರು. |

| | |
|---|---|
| **ಅಹವಾಲು ಸಂಖ್ಯೆ:** | **17/ 25.10.2021** |
| **ಸ್ಥಾವರ ಸಂಖ್ಯೆ:** | **ಚಿಕ್ಕಸುಗೂರು ಗ್ರೋಥ್ ಸೆಂಟರ್, ರಾಯಚೂರು ಇಂಡಸ್ಟ್ರಿಯಲ್ ಏರಿಯಾ ದಲ್ಲಿ ಬರುವ ಎಲ್ಲ ಸ್ಥಾವರಗಳಿಗೆ ಸಂಬಂಧಿಸಿದಂತೆ** |
| ಗ್ರಾಹಕರ ಹೆಸರು: | ಶ್ರೀ ಲಕ್ಷ್ಮೀರೆಡ್ಡಿ ರೈಸ್ ಮಿಲ್ ಓನರ್ಸ್ ಅಸೋಸಿಯೇಶನ್ ಅಧ್ಯಕ್ಷರು ರಾಯಚೂರು. |
| ಮೊಬೈಲ್ ನಂಬರ್ | 9880186469 |
| ವಿಭಾಗ / ಉಪವಿಭಾಗ | ರಾಯಚೂರು ನಗರ/ ಗ್ರಾಮೀಣ ವಿಭಾಗ |
| ಅಹವಾಲು | 1. ರಾಯಚೂರು ಇಂಡಸ್ಟ್ರಿಯಲ್ ಏರಿಯಾ ಮತ್ತು ಚಿಕ್ಕಸುಗೂರು ಗ್ರೋಥ್ ಸೆಂಟರ್ ನಲ್ಲಿ ಬರುವ ಎಲ್ಲಾ ಹೆಚ್ ಟಿ ಸ್ಥಾವರಗಳಿಗೆ ವಿದ್ಯುತ್ ಪೂರೈಕೆಯಲ್ಲಿ ತುಂಬಾ ಅಡಚಣೆಯಾಗುತ್ತಿದೆ ಅದನ್ನು ಕಡಿಮೆ ಮಾಡಿ ನಿರಂತರವಾಗಿ ವಿದ್ಯುತ್ ಪೂರೈಸಬೇಕು ಎಂದು ಮನವಿ ಮಾಡಿದರು.<br>2. ರಾಯಚೂರು ನಗರ ಇಂಡಸ್ಟ್ರಿಯಲ್ ಏರಿಯಾದ ನಂದಿನಿ ಡೈರಿ ಬಳಿ, ಯರಮರಸ್ ಕ್ಯಾಂಪ್ ಮತ್ತು ಶಂಶಾಲಂ ದುರ್ಗದವರೆಗೂ ಇರುವ 11 ಕೆವಿ ಲೈನ್ ನಲ್ಲಿ ವಾಹಕವು ಜೋತು ಬಿದ್ದಿದ್ದು ವಿದ್ಯುತ್ ಅಪಘಾತ ಆಗುವ ಸಂಭವವಿದೆ ಇದನ್ನು ಸರಿಪಡಿಸಬೇಕು ಎಂದು ಮನವಿ ಮಾಡಿದರು.<br>3. ಈಗಿರುವ ಶಕ್ತಿನಗರ ಶಾಖೆಯನ್ನು ಉಪವಿಭಾಗ ವನ್ನಾಗಿ ಪರಿವರ್ತಿಸಲು ಕಳೆದ 2-3 ವರ್ಷಗಳಿಂದ ಮನವಿಯನ್ನು ಮಾಡುತ್ತಿದ್ದೇವೆ ಆದರೆ ಈ ಈವರೆಗೂ ಅದು ಹಾಗಿರುವುದಿಲ್ಲ, ತಕ್ಷಣವೇ ಶಕ್ತಿನಗರ ಶಾಖೆಯನ್ನು ಉಪ ವಿಭಾಗವನ್ನಾಗಿ ಮಾಡಿ ಅಲ್ಲಿರುವ ಎಲ್ಲ ಗ್ರಾಹಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಮತ್ತೊಮ್ಮೆ ಮನವಿ ಮಾಡಿದರು . |
| ಕ್ರಮ | 1. ಕಾರ್ಯ ಮತ್ತು ಪಾಲನೆ ಉಪವಿಭಾಗ ಜೆಸ್ಕಾಂ ರಾಯಚೂರು ನಗರ ಹಾಗೂ ಗ್ರಾಮೀಣ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಎಲ್ಲ ಶಾಖಾಧಿಕಾರಿಗಳಿಗೆ ಅಲ್ಲಿನ 11 ಕೆವಿ ಮಾರ್ಗಗಳಲ್ಲಿ ಮೇಂಟೆನೆನ್ಸ್ ಮಾಡಿ ಎಲ್ಲ ತಾಂತ್ರಿಕ ದೋಷಗಳನ್ನು ಸರಿಪಡಿಸಿ ಜಂಗಲ್ ಕ್ಲಿಯರ್ ಮಾಡಿ ಮಾರ್ಗವನ್ನು ಸುಸ್ಥಿತಿಯಲ್ಲಿಟ್ಟು ಅಲ್ಲಿನ ಎಲ್ಲ ಸ್ಥಾವರಗಳಿಗೆ ನಿರಂತರವಾಗಿ ವಿದ್ಯುತ್ ಪೂರೈಕೆ ಮಾಡಲು ಸೂಚಿಸಲಾಯಿತು.<br>2. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ವಿ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ ಇವರಿಗೆ ಮತ್ತು ಶಾಖಾಧಿಕಾರಿ ರವರಿಗೆ ತಕ್ಷಣವೇ ಸ್ಥಳಕ್ಕೆ ಭೇಟಿ ಕೊಟ್ಟು, ಅಲ್ಲಿ ಮಾರ್ಗಗಳು ಸುಸ್ಥಿತಿಯಲ್ಲಿ ಇರದೇ ಇದ್ದರೆ ಅಂದಾಜು ಪಟ್ಟಿಯನ್ನು ಸಲ್ಲಿಸಿ ಮಂಜೂರಾತಿ ಪಡೆದು ಅತಿ ಶೀಘ್ರವಾಗಿ ಅವುಗಳನ್ನು ಸರಿಪಡಿಸಲು ಸೂಚಿಸಲಾಯಿತು.<br>3. ಶಕ್ತಿನಗರದಲ್ಲಿ ಹೊಸದಾಗಿ ಕಾರ್ಯ ಮತ್ತು ಪಾಲನೆ ಉಪ ವಿಭಾಗವನ್ನು ಪ್ರಾರಂಭಿಸಲು ಈಗಾಗಲೇ ಪ್ರಸ್ತಾವನೆಯನ್ನು ನಿಗಮ ಕಚೇರಿಗೆ ಸಲ್ಲಿಸಲಾಗಿದೆ ಆದಷ್ಟು ಶೀಘ್ರವಾಗಿ ಮಂಜೂರಾತಿ ಪಡೆಯಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು. |

**ಅಧೀಕ್ಷಕ ಅಭಿಯಂತರರು (ಪ್ರಭಾರಿ)**
**ಕಾರ್ಯ ಮತ್ತು ಪಾಲನೆ ವೃತ್ತ**
**ಜೆಸ್ಕಾಂ ರಾಯಚೂರು**

**ಸೂಕ್ತ ಮತ್ತು ದಯಾಪರ ಮಾಹಿತಿಗಾಗಿ ಪ್ರತಿಯನ್ನು ಸಲ್ಲಿಸಲಾಗಿದೆ:**

1. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ, ಕಲಬುರ್ಗಿ.
2. ಮಾನ್ಯ ನಿರ್ದೇಶಕರು (ತಾಂತ್ರಿಕ), ಜೆಸ್ಕಾಂ, ಕಲಬುರ್ಗಿ
3. ಮಾನ್ಯ ಮುಖ್ಯ ಅಭಿಯಂತರರು (ಕಾರ್ಯಾಚರಣೆ) ನಿಗಮ ಕಚೇರಿ, ಜೆಸ್ಕಾಂ, ಕಲಬುರ್ಗಿ.
4. ಮಾನ್ಯ ಅಧೀಕ್ಷಕ ಅಭಿಯಂತರರು, ವರ್ಕ್ಸ್ & ಮೆಂಟೈನೆನ್ಸ್ ವೃತ್ತ, ಕೆಪಿಟಿಸಿಎಲ್, ಮುನಿರಾಬಾದ್.

**ಮಾಹಿತಿಗಾಗಿ ಪ್ರತಿಯನ್ನು ಕೆಳಕಂಡ ಅಧಿಕಾರಿಗಳಿಗೆ ಕಳುಹಿಸುತ್ತಾ, ಸಂಬಂಧಿಸಿದ ದೂರಿಗೆ ತಾವು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರವನ್ನು ಒಂದು ವಾರದ ಒಳಗಾಗಿ ಸಲ್ಲಿಸಲು ಕೋರಲಾಗಿದೆ:**

5. ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ, ಜೆಸ್ಕಾಂ, ರಾಯಚೂರು.
6. ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯ ಮತ್ತು ಪಾಲನೆ ನಗರ ವಿಭಾಗ, ಜೆಸ್ಕಾಂ, ರಾಯಚೂರು.
7. ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯ ಮತ್ತು ಪಾಲನೆ ವಿಭಾಗ, ಜೆಸ್ಕಾಂ, ಸಿಂಧನೂರು.
8. ಕಾರ್ಯನಿರ್ವಾಹಕ ಅಭಿಯಂತರರು, ಟಿ ಎಲ್ & ಎಸ್ ಎಸ್ ವಿಭಾಗ, ಕೆಪಿಟಿಸಿಎಲ್, ಲಿಂಗಸುಗೂರು.
9. ಕಾರ್ಯನಿರ್ವಾಹಕ ಅಭಿಯಂತರರು, 220 ಕೆ.ವಿ ರಿಸಿವಿಂಗ್ ಸ್ಟೇಷನ್, ಕೆಪಿಟಿಸಿಎಲ್, ರಾಯಚೂರು.
10. ಕಚೇರಿ ಕಡತಕ್ಕೆ.